ಎನ್ನುವುದಷ್ಟೇ ಉಳಿದಿರುವ ಪ್ರಶ್ನೆ. 'ತಮ್ಮಯ್ಯ ಹಣಕಾಸಿನ ವ್ಯವಹಾರದಲ್ಲಿ ಮೋಸ ಮಾಡಿದ್ದ ಅನ್ನುವುದಕ್ಕೆ ಏನಾದರೂ ಸಾಕ್ಷಿಗಳಿವೆಯೇ, ಮುತ್ತಪ್ಪ?' ಕರಮಚಂದನ ಪ್ರಶ್ನೆ. 'ನೋಡಿ ಸಾರ್ ಆತ ನೀಡಿದ ರಸೀದಿಗಳ ಸ್ಯಾಂಪಲ್. ನಾವು ಗಿರಾಕಿಗಳಿಂದ ತಂದಿರುವಂತಹದು. ನಗದು ಪಡೆದು, ರಸೀದಿ ನೀಡಿದ್ದಾನೆ. ಅದನ್ನು ಸಂಸ್ಥೆಯ ಲೆಕ್ಕಕ್ಕೆ ಜಮಾ ಮಾಡಿಲ್ಲ. ಬಾಕಿ ಹಣ ವಸೂಲಿಗೆಂದು ಗಿರಾಕಿಗಳಲ್ಲಿ ವಿಚಾರಿಸಲು ಹೋದಾಗಲಷ್ಟೇ ಈ ಮೋಸ ಗೊತ್ತಾಗಿದ್ದು. ಕೆಲವು ರಸೀದಿ ಪುಸ್ತಕಗಳು ನಾಪತ್ತೆಯಾಗಿದ್ದು ಆಗಲೇ ಅರಿವಿಗೆ ಬಂದದ್ದು'.

'ಹಣ ವಸೂಲಿ ತಮ್ಮಯ್ಯನೇ ಮಾಡ್ತಿದ್ದನೇ?'

'ಹೌದು. ಆತನೇ ಮಾಡ್ತಿದ್ದ. ಯಾರೂ ಆತನ ಮೇಲೆ ಅನುಮಾನ ಪಟ್ಟಿರಲಿಲ್ಲ' ರಸೀದಿಯನ್ನು ಕೂಲಂಕಷವಾಗಿ ನಾವು ಪರಿಶೀಲಿಸಿದೆವು. ಹೆಚ್ಚಿನವುಗಳು ವಿರಾಜಪೇಟೆಯ ಸುತ್ತಮುತ್ತ ಊರುಗಳಲ್ಲಿದ್ದ ವ್ಯಾಪಾರಿಗಳೇ. ಎಲ್ಲದರಲ್ಲೂ ಇದ್ದ ಸಮಾನ ಅಂಶ, ನಗದು ಪಡೆದದ್ದು!

'ಇದರಲ್ಲಿರುವ ಸಹಿ ಯಾರದ್ದು? ಈ ಕೈಬರಹ ತಮ್ಮಯ್ಯನದ್ದೇ?'

'ಆತನದ್ದಲ್ಲ. ತನ್ನ ಕೈಬರಹದಲ್ಲಿ ರಸೀದಿ ಬರೆಯುವಷ್ಟು ಮೂರ್ಖನಲ್ಲ ತಮ್ಮಯ್ಯ. ಈ ಕೈಬರಹ ನಮ್ಮ ಸಂಸ್ಥೆಯ ಯಾವುದೇ ಸಿಬ್ಬಂದಿಯದ್ದಲ್ಲ. ಯಾರೋ ಅನಾಮಿಕನನ್ನು ಬಳಸಿ, ಚಳ್ಳೇಹಣ್ಣು ತಿನ್ನಿಸಿದ್ದಾನೆ'.

'ಒಟ್ಟಾರೆ ಎಷ್ಟು ಹಣ ಲಪಟಾಯಿಸಿದ್ದಾನೆ?'

'ನಮ್ಮ ಅಂದಾಜಿನಂತೆ ಸುಮಾರು ಮೂವತ್ತು ಲಕ್ಷ. ತಮ್ಮಯ್ಯನಿಗೆ ಇವುಗಳ ವಿವರ ಕೊಟ್ಟು, ಹಣ ವಾಪಾಸು ಕೊಡಲು ಹೇಳಿದಾಗ, ಆತ ತನಗೆ ಗೊತ್ತೇ ಇಲ್ಲವೆಂದಿದ್ದ...' ಕರಮಚಂದ ಕೆಲವು ರಸೀದಿಗಳ ಪಟವನ್ನು ಮೊಬೈಲಿನಲ್ಲಿ ತೆಗೆದುಕೊಂಡ. ಅಲ್ಲಿಂದ ನಾವು ಕಚೇರಿಗೆ ಹಿಂದಿರುಗಿದೆವು. ಯಾವುದೋ ಚಿಂತೆಯಲ್ಲಿದ್ದಂತೆ ಕರಮಚಂದ ಮೌನವಾಗಿದ್ದ. ನಾನೇ ಮೌನ ಮುರಿದೆ, 'ಈ ಪ್ರಕರಣಕ್ಕೆ ನಾವು ಪತನ ಅಂತ ಹೆಸರಿಡಬಹುದು. ಕಟ್ಟಡದಿಂದ ವ್ಯಕ್ತಿಯ ಪತನ. ತಮ್ಮಯ್ಯನ ಮೌಲ್ಯಗಳ ಪತನ! ಈ ಪತನ ಪ್ರಕರಣಕ್ಕೆ ಬಹುತೇಕ ಕೊನೆ ಹಾಡಿದಂತೇ ಅಲ್ವೇ?'

'ಬಹುತೇಕ ಕೊನೆಯೇ. ಆದರೆ ಯಾವಾಗಲೂ ಸಡಿಲವಾದ ಕೊಂಡಿಗಳು ಸಂಶಯಾತೀತವಾಗಿ ಬಗೆಹರಿಯದೆ ಪ್ರಕರಣಕ್ಕೆ ಮಂಗಳ ಹಾಡುವಂತಿಲ್ಲ. ಇಲ್ಲಿರುವ ಸಡಿಲವಾದ ಕೊಂಡಿಗಳು. ಕೊಡವ ಸಮಾಜದ ಕ್ಯಾಮೆರಾದ ಮುಖ ಬದಲಿಸಿದವನಾರು? ಪ್ರವೀಣನ ಗಿರಾಕಿಗಳಿಂದ ಹಣ ವಸೂಲು ಮಾಡಿದ್ದು ಮೇಲ್ನೋಟಕ್ಕೆ ತಮ್ಮಯ್ಯನ ಕೃತ್ಯವೆಂದೇ ಕಂಡರೂ, ನಮ್ಮಲ್ಲಿ ದೃಢವಾದ ಪುರಾವೆಗಳಿಲ್ಲ. ಪ್ರವೀಣನಿಗೆ ತಾರಸಿಯಲ್ಲಿ ಭೇಟಿಯಾಗಲು ಕರೆ ನೀಡಿದ ಮೆಸೇಜುಗಳ ಗೊಂದಲ. ಕೊನೆಯದ್ದು, ಪ್ರವೀಣನೇ ಕೆಳಗೆ ಹಾರಿದ್ದು ಎನ್ನಲೂ ನಮ್ಮಲ್ಲಿ ಖಚಿತ ಆಧಾರಗಳಿಲ್ಲ'.

'ಎಷ್ಟೋ ಬಾರಿ, ಸಾಂದರ್ಭಿಕ ಸಾಕ್ಷ್ಯಗಳ ಆಧಾರದಲ್ಲಿ ಅಪರಾಧ ನಿರ್ಣಯಿಸುವುದನ್ನು ನ್ಯಾಯಾಲಯಗಳೂ ಒಪ್ಪಿವೆ. ನೀನು ಎತ್ತಿದ ಪ್ರಶ್ನೆಗಳೂ ಅಷ್ಟೇನೂ ಮಹತ್ವಪೂರ್ಣದ್ದಲ್ಲ. ಕ್ಯಾಮೆರಾ ಬದಲಿಸಿದ್ದು ಪ್ರವೀಣ ಅಥವಾ ಆತನ ಸೂಚನೆಯ ಮೇರೆಗೆ ಇನ್ಯಾರೋ ಇರಬಹುದು. ಹಾಗೆಯೇ, ತಮ್ಮಯ್ಯ ಹಣ ಲಪಟಾಯಿಸದೇ ಆ ರಸೀದಿಗಳು ಹೇಗೆ ಬಂದವು? ಫೋನಿನ ಮೆಸೇಜನ್ನು ತಮ್ಮಯ್ಯ ಅಳಿಸಿದ್ದಾನೆ, ಅಷ್ಟೇ. ಕೊನೆಯ ಸಂಶಯಕ್ಕೆ ಅರ್ಥವೇ ಇಲ್ಲ ಯಾಕೆಂದರೆ ಮೊದಲಿನ ಪ್ರಶ್ನೆಗಳ ಉತ್ತರಗಳ ಆಧಾರದಲ್ಲಿ ಆ ಪ್ರಶ್ನೆಗೆ ಉತ್ತರ ಕಂಡು ಹಿಡಿಯಬಹುದು'.

'ಬಿದ್ದಪ್ಪ, ನೀನೊಂದು ಕೆಲಸ ಮಾಡು. ಕೊಡವ ಸಮಾಜದ ಸನಿಹದ ವೃತ್ತದಲ್ಲಿ ಸಿಸಿ ಕ್ಯಾಮೆರಾಗಳಿವೆ. ಅವುಗಳನ್ನು ಠಾಣೆಯಲ್ಲಿ ಪರಿಶೀಲಿಸು. ಹಾಗೆಯೇ, ಸಮೀಪದ ಅಂಗಡಿಗಳಲ್ಲಿರುವ ಸಿಸಿ ಕ್ಯಾಮೆರಾಗಳನ್ನೂ ನೋಡು. ಆ ವ್ಯಕ್ತಿಯ ಬಗ್ಗೆ, ಆತನ ವಾಹನದ ಬಗ್ಗೆ ಗೊತ್ತಾಗಬಹುದು. ನಾನು ಆ ರಸೀದಿಗಳ ಹಿಂದೆ ಹೋಗುತ್ತೇನೆ'.

* * *

ಮರುದಿನ ಮಧ್ಯಾಹ್ನದವರೆಗೆ ನನಗೆ ಸಿಸಿಟೀವಿಗಳ ಪರಿಶೀಲನೆಯ ಕೆಲಸವೇ ಆಯಿತು. ಎಲ್ಲವನ್ನೂ ಕ್ರೋಡೀಕರಿಸಿ, ಪರೀಕ್ಷಿಸಿದಾಗ, ಆತ ಉಪಯೋಗಿಸಿದ ವಾಹನ ಕೊನೆಗೂ ಪತ್ತೆಯಾಯಿತು. ಅದೊಂದು ಸುಜುಕಿ ಡಿಸೈರ್ ಕಾರು. ಅದನ್ನು ಪ್ರವೀಣನ ಅಂಗಡಿಯೆದುರು ಕಂಡಿದ್ದೆ. ಅದು ಆತನದ್ದೇ ವಾಹನ! ಅಲ್ಲಿಗೆ ನನ್ನ ವಾದಕ್ಕೆ ಪುಷ್ಟಿ ಸಿಕ್ಕಿದಂತಾಯಿತು. ರಾತ್ರಿ